# ಗೊಡುಗುಪಾಲ

ತೆಲುಗಿನ ಪ್ರಸಿದ್ಧ, ವಿಶಿಷ್ಟ ಲೇಖಕ ದಿವಂಗತ ತಿರುಮಲ ರಾಮಚಂದ್ರರು ಗೊಡುಗುಪಾಲನ ಪ್ರಸಂಗವನ್ನು ತಮ್ಮ ತಾತನವರ ಮುಖೋದ್ಗತವಾಗಿ ಕೇಳಿ ನಿರೂಪಿಸಿದ್ದಾರೆ. ಇದು ತೆಲುಗಿನಲ್ಲಿ ಪ್ರಸಿದ್ಧವಾಗಿದೆ. ಕೆಲವು ವಿಶೇಷ ಸಂಚಿಕೆಗಳಲ್ಲಿ 'ಗೊಡುಗುಪಾಲುಡು' (ಕೊಡೆಪಾಲ, ಸತಿಗೆ ಹಿಡಿಯುವವನು) ಹೆಸರಿನಲ್ಲಿ ಮುದ್ರಣಗೊಂಡಿದೆ. ಕೃಷ್ಣದೇವರಾಯರ 500ನೆಯ ಪಟ್ಟಾಭಿಷೇಕ ಮಹೋತ್ಸವದ ವಿಶೇಷಾಂಕ 'ವನಮಾಲ'(ಪ್ರಧಾನ ಸಂಪಾದಕ: ಶ್ರೀ ಮೋದುಗುಲ ರವಿಕೃಷ್ಣ)ದಲ್ಲಿಯೂ ಪ್ರಕಟವಾಗಿದೆ. ಈ ಗೊಡುಗುಪಾಲ ಕೃಷ್ಣದೇವರಾಯರ ರಾಜಲಾಂಛನ ಬೆಳ್ಗೊಡೆಯನ್ನು ಹಿಡಿವ ಕಾಯಕದವನು. ತಿರುಮಲ ರಾಮಚಂದ್ರರ ಆತ್ಮಕಥೆಯನ್ನು (ಹಂಪಿನುಂಚಿ ಹರಪ್ಪದಾಕ) ಆರ್. ಶೇಷಶಾಸ್ತ್ರಿ ಕನ್ನಡಿಸಿದ್ದಾರೆ.

**■ ತೆಲುಗು ಮೂಲ: ತಿರುಮಲ ರಾಮಚಂದ್ರ**

**■ ಅನುವಾದ: ಸ.ರಘುನಾಥ**

ಕಲೆ: ಭಾವು ಪತ್ತಾರ್

ಗೊಡುಗುಪಾಲ (ಕೊಡೆಪಾಲ) ಎಂಬ ಹೆಸರೇ ವಿಚಿತ್ರವಾಗಿದೆಯಲ್ಲವೆ? ಸದಾ ಕೊಡೆ ಹಿಡಿದಿರುವವನು ಎಂದು ಈ ಹೆಸರಿನರ್ಥ. ಗೊಡುಗುಪಾಲನ ಹೆಸರೇನೋ ತಿಳಿಯದು. ಅವನ ವೃತ್ತಿಯ ಹೆಸರೇ ಅವನ ಹೆಸರಾಗಿಬಿಟ್ಟಿತ್ತು. ಗೊಡುಗುಪಾಲ ಕೃಷ್ಣದೇವರಾಯರ ಬಳಿ ರಾಜಲಾಂಛನವಾದ ಬೆಳ್ಗೊಡೆಯನ್ನು ಹಿಡಿವ ಬಂಟ. ಅಂಗರಕ್ಷಕರು, ಕೊಡೆ ಹಿಡಿಯುವವರು, ಚಾಮರಧಾರಿಗಳು, ಅಡಪ (ತಾಂಬೂಲದ ಕರಂಡಿಕೆ) ಹಿಡಿದು ಪಕ್ಕದಲ್ಲಿ ನಿಲ್ಲುವವರು ರಾಜರಿಗೆ ಪರಮ ಆಂತರಂಗಿಕರು. ಅಂಥ ಅಡಪದ ವಂಶೀಕರೇ ಅಡಪಾ ರಾಮಕೃಷ್ಣರಾವ್ ಅವರು. ಅವರದು ರಾಯರ ಕಾಲದ ವಂಶ.

ರಾಜ ಸಭಾಭವನದ ಬಾಗಿಲ ಕಾವಲು ತಿಮ್ಮನ್ನನ ಕುರಿತು ಕೂಡ ಇಂತಹ ಕಥೆಗಳಿವೆ. ಅವನ ಅನುಮತಿಯಿಲ್ಲದೆ ರಾಜರ ಬಳಿಗೆ ಹೋಗಲು ಯಾರಿಗೂ ಅವಕಾಶವಿರಲಿಲ್ಲ. ಆದುದರಿಂದ ಕವಿ–ಪಂಡಿತರು ಅವನನ್ನು ಪದ್ಯಗಳಿಂದ ಮೆಚ್ಚಿಸಿ, ಖುಶಾಮದ್ ಮಾಡಿ ಶೀಘ್ರ ರಾಜದರ್ಶನ ಪಡೆಯುತ್ತಿದ್ದರು. ಒಮ್ಮೆ ಅರಸನ ದರ್ಶನಕ್ಕೆ ಬಹಳ ಮಂದಿ ಕವಿಗಳು ಬಂದರು. ಪೆದ್ದನನೋ ('ಮನುಚರಿತ್ತಮು' ಕರ್ತೃ ಅಲ್ಲಸಾನಿ ಪೆದ್ದನಾಮಾತ್ಯ), ಮತ್ತೊಬ್ಬರೋ 'ಬಾಗಿಲ ಕಾವಲ ತಿಮ್ಮಾ' ಎಂದು ಕಂದಪದ್ಯದ ಮೊದಲ ಪಾದ ಹೇಳಿದರಂತೆ. ಪಕ್ಕದಲ್ಲಿದ್ದ ಮುಕ್ಕು ತಿಮ್ಮನ್ನನೋ ಮತ್ತಾರೋ 'ಪ್ರಕಟದೊಳು ಸುಕವಿವರರ ಪಾಲಿನ ಮರವೇ' ಎಂದು ಎರಡನೆಯ ಪಾದ ನುಡಿದರಂತೆ. ಮತ್ತೊಬ್ಬ ಕವಿ 'ನಿನಗೀ ಪದ್ಯ ಪಡೆಯೋ' ಎಂದು ಮೂರನೆಯ ಪಾದ ಹೇಳಿದರಂತೆ. ಬಾಗಿಲು ಕಾಯುವ ತಿಮ್ಮನ್ನ ರಾಜನ ಬಳಿ ಇರುತ್ತಿದ್ದನಲ್ಲವೆ? ಹಾಗಾಗಿ ರೇಷಿಮೆ ಪೀತಾಂಬರ ಉಟ್ಟು, ರೇಷಿಮೆ ಮೇಲು ಹೊದಿಕೆ ಹೊದೆಯುತ್ತಿದ್ದ. ತೆನಾಲಿ ರಾಮಕೃಷ್ಣನು 'ನನಗೀ ಹೊದ್ದಿಕೆಯೇ ಸಾಕು ನಯದಲಿ ನೀಡೋ' ಎಂದು ನಾಲ್ಕನೆಯ ಪಾದವನ್ನು ಪೂರ್ಣಗೊಳಿಸಿದನಂತೆ.

ಗೊಡುಗುಪಾಲನೂ ಅಂತಹ ಆಂತರಂಗಿಕನೇ. ರಾಯನು ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದಾಗಲೂ ಆಳು ಹೊರುವಷ್ಟು ಭಾರವಿದ್ದ ಆ ಬೆಳ್ಗೊಡೆ ಹಿಡಿದು ಕುದುರೆಯ ಹಿಂದೆ ನಡೆಯುವುದು, ಅಗತ್ಯವೆನಿಸಿದರೆ ಓಡುವುದು ಗೊಡುಗುಪಾಲನ ಮುಖ್ಯ ಕೆಲಸ. ರಾಯನಿಗೆ ನೆರಳಿನಂತೆ ಸದಾ ಹಿಂದೆಯೇ ಇರುತ್ತಿದ್ದ.

ರಾಯನ ಬೇಸಗೆ ಕಾಲದ ರಾಜಧಾನಿ ಈಗಿನ ಅನಂತಪುರಂ ಜಿಲ್ಲೆಯ ಪೆನುಗೊಂಡ. ಹಂಪಿಯ ವಿಜಯನಗರದಿಂದ ಸುಮಾರು ನೂರಿಪ್ಪತ್ತು ಮೈಲು ದೂರ. ಆದರೆ ಹಂಪಿಯಿಂದ ಪೆನುಗೊಂಡಕ್ಕೆ ಆ ಕಾಲದಲ್ಲಿ ಸುರಂಗಮಾರ್ಗವೊಂದಿತ್ತು. ಅದರ ಮೂಲಕ ಪಯಣಿಸಿದರೆ ಎಂಬತ್ತು ಮೈಲಿ ದಾಟದು. ಆ ಮಾರ್ಗ ಗಜಶಾಲೆಯಿಂದ ಇದ್ದಿತಂತೆ.

ರಾಯನು ಪ್ರತಿ ತ್ರಯೋದಶಿಯ ಮುಸ್ಸಂಜೆಯಲ್ಲಿ ವಿರೂಪಾಕ್ಷನ ದರ್ಶನ

